ಉ) ಈ ಯೋಜನೆಯ ಕಳಪೆ ಕಾಮಗಾರಿಗಳ ಬಗ್ಗೆ ಸಾರ್ವಜನಿಕರು ಮಾಡಿರುವ ಸಾಕಷ್ಟು ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕೆರೆಯ ಹೂಳೆತ್ತುವ ಮತ್ತು ಕೆರೆಯ ಅತಿಕ್ರಮಣವನ್ನು ತೆರವುಗೊಳಿಸಲು ಹಾಗೂ ಅದನ್ನು ತಡೆಯಲು ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ.

ಆ) ಕೆರೆಯ ಕೋಡಿಯನ್ನು ಕಡಿಮೆ ಮಾಡಿರುವುದಿಲ್ಲ.

ಇ) 2004–05ನೇ ಸಾಲಿನಲ್ಲಿ ಅತಿ ಅವಶ್ಯವಿರುವ ಬಲದಂಡೆ ಕಾಲುವೆಯ ದುರಸ್ತಿ ಕಾಮಗಾರಿಗಳನ್ನು ರೂ. 8.00 ಲಕ್ಷಗಳ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

ಈ) ತುಂಗಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಹೀರೇಕೆರೂರು ತಾಲ್ಲೂಕಿನ ಅಡಿ ಬರುವ ಕಾಮಗಾರಿಗಳನ್ನು ಜೂನ್–2006ರ ಹೊತ್ತಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಊ) ಪ್ರಶ್ನೆ 'ಉ'ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

306(888) ಶ್ರೀ ಪಾಟೀಲ್ ಬಿ.ಆರ್.(ಆಳಂದ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಅಂತರ್ಜಲ ಕುಸಿದು ಹೋಗುತ್ತಿರುವ ಪ್ರಮಾಣವೇನು ?

ಆ) ಈ ಸಮಸ್ಯೆಯ ಗಂಭೀರತೆಯ ಬಗ್ಗೆ ಸರ್ಕಾರ ಗಮನಿಸಿದೆಯೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರತಿ ವರ್ಷ 0.80 ಮೀ. ನಿಂದ 1.50 ಮೀಟರ್ ಪ್ರಮಾಣದಷ್ಟು ಅಂತರ್ಜಲ ಮಟ್ಟವು ಕುಸಿಯುತ್ತಿದೆ.

ಆ) ಗಮನಿಸಿದೆ.

307(672) Shri D.R.Patil will the Chief Minister be pleased to State ?

a) How many IT companies are operating in Bangalore city ;

b) What is the Manpower strength of these Companies;

c) Among them, how many are from Karnataka (Districtwise details may be furnished) ;

d) What is the turn over of these companies for the past 3 years (yearwise details to be furnished);

e) What is the amount of tax remitted by these companies to the Government ;

f) With these companies functioning in Bangalore, Which are the different types of benefits the State has derived ;

g) Whether the Services of these companies have been utilised for the implementing e-governance comprehensively? (details to be furnished)?

Sri. N. Dharmshing(Chief minister):

a) 1435 IT companies are operating in Bangalore city.

b) 1,85,000 persons are employed in IT Sector

c) Information not available

d) Export turnover of IT companies for the past 3 years is as follows :(Rs. in crores)

Sector	2001-02	2002-03	2003-04
Software	9903.00	12350.00	181000.00
Hardware	838.00	1404.00	1755.00

e) There is 100% tax exemption on export sale. However from the local transactions of these companies in the last 3 years the details of the total revenue generated from Commercial Tax is as follows

Year	Tax amount (Rs. in lakhs)
01-02	692.25
02-03	2816.65
03-04	3574.20

f) Location of IT Companies in Bangalore has resulted in the increase of direct as well as indirect employement, increased turn over in commercial activities, growth of supplementary industries and increased income to the state exchequer through service tax etc.,

g) To implement e-Governance Scheme comprehensively, quotations called for from Hardware & Software vendor companies which are in the empanelled list and orders are given. For the implementation of the e-goverance scheme, MoU has been entered into with INTEL and Microsoft Companies.

308(891) ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಡಳಿತದಲ್ಲಿ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಸರ್ಕಾರವು ಅನುಷ್ಠಾನಗೊಳಿಸಿರುವುದೇ ;